JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ನವ್ಯೋತ್ತರ ಸ್ತ್ರೀವಾದಿ ಸಾಹಿತ್ಯ ವಿಮರ್ಶೆ - ಒಂದು ವಿಶ್ಲೇಷಣೆ

**ಸೌಮ್ಯ ಹೆಚ್. ಎಲ್**
**ಸಹಾಯಕ ಪ್ರಾಧ್ಯಾಪಕಿ**
**ಕನ್ನಡ ವಿಭಾಗ**
**ನ್ಯೂ ಹೊರೈಜಾನ್ ಕಾಲೇಜು ಮಾರತ್ತಹಳ್ಳಿ**

ಸಾಹಿತ್ಯ ಶ್ರೀಮಂತಿಕೆಯನ್ನು ಹೊಂದಿರುವ ಕನ್ನಡ ಭಾಷಾ ಸಾಹಿತ್ಯ ಹಲವಾರು ಘಟ್ಟಗಳನ್ನು ದಾಟಿ ಬಂದಿದೆ. ಬಾಷಿಕ ದೃಷ್ಟಿಯಿಂದ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಅವಸ್ಥೆಗಳನ್ನು ದಾಟಿ ಇಂದಿನ ವಿಜ್ಞಾನ – ತಂತ್ರಜ್ಞಾನದ ಕಾಲಘಟ್ಟಕ್ಕೂ ತೆರೆದುಕೊಂಡಿದೆ. ವಚನ ಸಾಹಿತ್ಯ, ದಾಸಸಾಹಿತ್ಯದಿಂದ ಸಮೃದ್ಧಗೊಂಡಿರುವ ಕನ್ನಡ ಸಾಹಿತ್ಯ ಕೆಲವು ತಾತ್ವಿಕ ಭಿನ್ನತೆಗಳಿಂದಾಗಿ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ, ಮಹಿಳಾ ಸಾಹಿತ್ಯ, ಮುಸ್ಲಿಂ ಸಾಹಿತ್ಯ ಎಂಬ ಹಲವು ಬಗೆಗಳಾಗಿ ರೂಪುಗೊಂಡಿದೆÉ. ಇವುಗಳ ಜೊತೆಗೆ ಇಂದು ಯಾವ ಒಂದು ಬಗೆಯ ತಾತ್ವಿಕತೆಗೂ ಕಟ್ಟುಬೀಳದ ಸಾಹಿತ್ಯ ರಚನೆ ಕೂಡ ನಡೆಯುತ್ತಿದ್ದು, ಹೆಚ್ಚೆಚ್ಚು ಓದುಗರನ್ನು ತಲುಪುವ ನಿಟ್ಟಿನಲ್ಲಿ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿರುವುದು ಶ್ಲಾಘನೀಯವಾಗಿದೆ.

ನವ್ಯೋತ್ತರ ಸಾಹಿತ್ಯ.

ಹೊಸಗನ್ನಡ ಸಾಹಿತ್ಯದ ಉದಯವನ್ನು ಮುದ್ದಣ್ಣನಿಂದ ಗುರುತಿಸಿದರೆ, 1920 ರಲ್ಲಿ ಪ್ರಕಟವಾದ ಬಿ.ಎಂ.ಶ್ರೀಯವರ 'ಇಂಗ್ಲೀಷ್ ಗೀತೆಗಳು' ಎಂಬ ಕವನ ಸಂಕಲನದಿಂದ ನವೋದಯ ಸಾಹಿತ್ಯದ ಆರಂಭವನ್ನು ಗುರುತಿಸಲಾಗುತ್ತದೆ. 1950ರವರೆಗೂ ಪ್ರಕರತೆಯನ್ನು ಹೊಂದಿದ್ದ ನವೋದಯ ಸಾಹಿತ್ಯ 1950ರ ನಂತರವೂ ಮುಂದುವರೆಯುತ್ತದೆ. ಈ ನಡುವೆ ಪ್ರಗತಿಶೀಲ ಸಾಹಿತ್ಯ ರೂಪುಗೊಂಡು 1970ರ ವೇಳೆಗೆ ಇಳಿಮುಖವಾಗತೊಡಗಿ 1970ರಿಂದ ನವ್ಯ ಸಾಹಿತ್ಯ ರೂಪಪಡೆಯುತ್ತದೆ. 1980ರ ವೇಳೆಗೆ ತನ್ನ ತೀಕ್ಷ್ಣತೆಯನ್ನು ಕಳೆದುಕೊಳ್ಳುತ್ತದೆ. ದಲಿತ ಬಂಡಾಯ ಸಾಹಿತ್ಯ ಚಳುವಳಿಯ ಜೊತೆಜೊತೆಗೆ ಮಹಿಳಾ ಸಾಹಿತ್ಯವು ಕೂಡ ತನ್ನ ಪಯಣವನ್ನು ಮುಂದುವರೆಸುತ್ತಿದೆ. 1980ರ ನಂತರ ರೂಪುಗೊಳ್ಳುತ್ತಿರುವ ಸಾಹಿತ್ಯವನ್ನು ನವ್ಯೋತ್ತರ ಸಾಹಿತ್ಯ ಎಂದು ಗುರುತಿಸಲಾಗುತ್ತದೆ.

ಸಾಹಿತ್ಯದ ಈ ವಿಭಾಗಗಳು ಸ್ಥೂಲ ಸ್ವರೂಪದವಾಗಿದ್ದು, ಈ ಎಲ್ಲಾ ಸಿದ್ಧಾಂತ ತಾತ್ವಿಕತೆಗಳು ಎಲ್ಲ ಕಾಲಗಳಲ್ಲಿಯೂ ಸೂಕ್ಷ್ಮವಾಗಿ ಚಲಿಸಿವೆ ಎಂಬುದನ್ನು ಮರೆಯಬಾರದು. 1980ರಲ್ಲಿ ಆರಂಭಗೊಂಡ ನವ್ಯೋತ್ತರ ಸಾಹಿತ್ಯ ಹಲವು ರೂಪಗಳಲ್ಲಿ ಹಲವು ತತ್ವ ಸಿದ್ಧಾಂತ, ಚರ್ಚೆ, ಸಂಸ್ಕøತಿಯ ವಿಮರ್ಶೆ, ಪ್ರಶ್ನೆಗಳು, ತಂತ್ರಜ್ಞಾನದ ಪ್ರಭಾವ ಮುಂತಾದ ನೂರಾರು ವಿಚಾರಗಳೊಂದಿಗೆ ಮುಂದುವರೆಯುತ್ತಾ ಬಂದಿದೆ. ನವ್ಯೋತ್ತರ ಸಾಹಿತ್ಯ ದೇವನೂರು ಮಹದೇವ, ಪೂರ್ಣಚಂದ್ರ ತೇಜಸ್ವಿ, ಬರಗೂರು ರಾಮಚಂದರಪ್ಪ, ಸಾರಾ ಅಬೂಬಕರ್ ಅವರ ಬರವಣಿಗೆಗಳಿಂದ ಇಂದಿನ ಅಬ್ದುಲ್ ರಶೀದ್, ರಾಘವೇಂದ್ರ, ಅನುಸೂಯ ಕಾಂಬ್ಳೆ, ಕೆ.ವೈ.ನಾರಾಯಣ ಸ್ವಾಮಿ, ಹೆಚ್.ಆರ್.ಸುಜಾತ, ಎಚ್ ಎಸ್ ಅನುಪಮ, ಕೇಶವ ಶರ್ಮ, ಮೂಡ್ನಾಕೂಡು ಚಿನ್ನಸ್ವಾಮಿ ಮುಂತಾದವರ ಬರವಣಿಗೆಗಳಲ್ಲೂ ಮುಂದುವರೆಯುತ್ತಿದೆ.

ಸ್ತ್ರೀವಾದ

ಸುಮಾರು 70ರ ದಶಕದಲ್ಲಿಯೇ ಸ್ತ್ರೀವಾದಿ ಪ್ರಜ್ಞೆ ಕನ್ನಡ ಸಾಹಿತ್ಯ ವಲಯದಲ್ಲಿ ಕಣ್ತೊಡೆಯ ತೊಡಗಿತು. ನವ್ಯೋತ್ತರದ ವೇಳೆಗೆ ತನ್ನದೇ ತಾತ್ವಿಕತೆಯನ್ನು ರೂಪಿಸಿಕೊಳ್ಳುವ ಮಾರ್ಗದಲ್ಲಿ ಸಾಕಷ್ಟು ಯಶಸ್ಸನ್ನು ಕಂಡಿತು. ಪ್ರಸ್ತುತ ಸ್ತ್ರೀವಾದ ಪ್ರಜ್ಞೆ ಒಂದು ಧಾರೆಯವಾಗಿ ಹರಿಯುತ್ತಲೇ ಸಾಗಿದೆ. ಸ್ತ್ರೀವಾದಿ ಪ್ರಜ್ಞೆಯು ಮೊದಲಿಗೆ ಹೆಣ್ಣಿನ ಎಲ್ಲ ಬಗೆಯ ನೋವುಗಳಿಗೆ ಪಿತೃಪ್ರಧಾನ ಸಮಾಜವೇ ಕಾರಣ ಎಂಬುದನ್ನು ಗುರುತಿಸಿತು. ಈ ಪಿತೃಪ್ರಧಾನತೆ ಅಧಿಕಾರದ ನೆಲೆಯನ್ನು ಆವರಿಸಿ ಮಹಿಳೆಯನ್ನು ಅಧೀನತೆಯ ನೆಲೆಗೆ ತಳ್ಳಲು ಸ್ತ್ರೀಪುರುಷರ ಜೈವಿಕ ಭಿನ್ನತೆಗಳನ್ನು ಕಾರಣವಾಗಿಸಿದೆ. ಆದರೆ ಜೈವಿಕ ಭಿನ್ನತೆ ಭಿನ್ನತೆಯೇ ಹೊರತು ಶ್ರೇಣೀಕರಣವಲ್ಲ, ಎಂಬುದನ್ನು ಸ್ತ್ರೀವಾದಿ ಪ್ರಜ್ಞೆ ಗುರುತಿಸಿ, ಸ್ತ್ರೀಪುರುಷರ ಸಮಾನತೆಯನ್ನು ಬಯಸುತ್ತದೆ. ಫೆಮಿನಿಷ್ಟ ಥಿಯರ್ ಅಂಡ್ ಫೇಮಿನಿಸ್ಟ ಮೂವ್‌ಮೆಂಟ್‌ನಲ್ಲಿ ಸ್ಟ್ಯಾನ್ಲಿ ಎಫ್‌ಕಾಟ್ ಗುರುತಿಸುವಂತೆ "ಸ್ತ್ರೀವಾದ ಒಂದು ಬಗೆಯ ವೈಶಮ್ಯದ ನೆಲೆಯದು, ಲಿಂಗಜಾತಿಯ ಒಗ್ಗಟ್ಟಿನಲ್ಲಿ ವೈಯಕ್ತಿಕ ಸ್ವಾತಂತ್ರ್ಯಕ್ಕಾಗಿ ಮೂಡುವಂತಹದು" ಎನ್ನುತ್ತಾಳೆ.

ಸ್ತ್ರೀವಾದಿ ವಿಮರ್ಶೆ

ಸಂಸ್ಕøತಿಯ ವಕ್ತಾರಿಕೆ, ವಾಹಕತೆಗಳನ್ನು ಮಾಡುವ ಸಾಹಿತ್ಯ ತನ್ನ ಜೀವಸೆಲೆಯನ್ನು ಸಂಸ್ಕøತಿಯಿಂದಲೇ ಪಡೆಯುತ್ತದೆ. ಸಂಸ್ಕøತಿಯು ಸಮಾಜದ ಒಟ್ಟು ರಚನೆಯಲ್ಲಿಯೇ ತನ್ನ ಬೇರನ್ನು ಬಿಟ್ಟಿರುವುದರಿಂದ ಸಮಾಜದ ರಚನೆಯನ್ನು ಸಾಂಸ್ಕøತಿಕ

ಸ್ವರೂಪವನ್ನು ಸಾಹಿತ್ಯವನ್ನೂ ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. ಸಮಾಜದ ಪುರುಷ ಪ್ರಧಾನತೆ ಸಂಸ್ಕøತಿಗೂ ಸಂಸ್ಕøತಿಯಲ್ಲಿ ಹರಳುಗಟ್ಟಿದ ಪುರುಷ ಪ್ರಧಾನತೆ ಮುಂದಿನ ಸಮಾಜಕ್ಕೂ, ಸಾಹಿತ್ಯಕ್ಕೂ ಇಳಿದಿದೆ. ಇಂಥ ಸಮಾಜ, ಸಂಸ್ಕøತಿಗಳ ಏಕಮುಖತೆ, ದಮನಕಾರಿತ್ವ ಅಸಮಗ್ರತೆ ಒಂದು ಕಾಲದವರೆಗೆ ಪ್ರಶ್ನೆಗೆ ಒಳಗಾಗದೆ, ವಿರೋಧವನ್ನು ಎದುರಿಸದೆ ಸ್ವೀಕೃತವಾಗಿ ಉಳಿಯಿತು. ಸಮಾನತೆಯ ದೃಷ್ಟಿಕೋನ ಎಚ್ಚರಗಳು ಅಂಚಿಗೆ ದೂಡಲ್ಪಟ್ಟ ಅರಿವನ್ನು ದನಿಯನ್ನು ಬಲಪಡಿಸಿದ ಸಂದರ್ಭದಲ್ಲಿ ಸಹಜ ಐತಿಹಾಸಿಕ ಬೆಳವಣಿಗೆಯಾಗಿ ಸ್ತ್ರೀವಾದಿ ವಿಮರ್ಶೆ ಬಂದಿದೆ.

ಒಂದು ಕಲಾಕೃತಿಯು ಸಾಮಾಜಿಕ, ಸಾಂಸ್ಕøತಿಕ ಹಿನ್ನಲೆಯಲ್ಲಿಯೇ ನಮಗೆ ದಕ್ಕುವುದೆಂದು ಕೇಟ್ ಮಿಲೆಟ್ ಸ್ಪಷ್ಟವಾಗಿ ಹೇಳುತ್ತಾಳೆ. ಸಿಮೋನ್‍ದ ಬುವಾ, ಬೆಟ್ಟಿಫ್ರೀಡನ್, ಜರ್ಮನ್ ಗ್ರೇರ್ ಅವರು ಹೀಗೆಯೇ ಹೇಳುತ್ತಾರೆ. ಸ್ತ್ರೀವಾದಿ ವಿಮರ್ಶೆಯು ಅಂತರ್ ಶಿಸ್ತೀಯ ನೆಲೆಯಲ್ಲಿ ರೂಪುಗೊಂಡಿದ್ದು, ಅದು ತನ್ನ ವಿಮರ್ಶೆಗೆ, ಭಾಷಾವಿಜ್ಞಾನ, ಮನಃಶಾಸ್ತ್ರ, ಮಾನವಶಾಸ್ತ್ರ, ಸಮಾಜ ವಿಜ್ಞಾನ, ಸಂಸ್ಕøತಿ ಎಲ್ಲವನ್ನು ಬಳಸಿಕೊಳ್ಳುತ್ತದೆ. ಪಿತೃ ಸಂಸ್ಕøತಿಯ ಪರಾಮರ್ಶೆ ಮತ್ತು ವಿರೋಧವು ಸ್ತ್ರೀವಾದಿ ವಿಮರ್ಶೆಯ ಮುಖ್ಯ ಗುರಿಯಾಗಿದೆ.

ಸಾಹಿತ್ಯ ಪುರುಷರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಸ್ತ್ರೀಪುರುಷರಿಬ್ಬರ ಮಾದರಿಗಳನ್ನು ಜಾರಿಗೆ ಬಿಡುತ್ತದೆ. ಅಧಿಕಾರದ ನೆಲೆಯ ಗಂಡು ಅಧೀನ ನೆಲೆಯ ಹೆಣ್ಣು ಈ ಮಾದರಿಗಳಾಗಿವೆ. ಹೆಂಗಸಿನ ನಿರೀಕ್ಷಿಸಿದ ಅಧೀನತೆಯ ಅಪೇಕ್ಷೆಯ ಅಭಿವ್ಯಕ್ತಿ ಸಾಹಿತ್ಯದಲ್ಲಿ ಹತ್ತಾರು ರೀತಿಗಳಲ್ಲಿ ಒಡಮೂಡಿದೆ. ಇದನ್ನು ಸ್ತ್ರೀವಾದಿ ವಿಮರ್ಶೆ ಗಮನಿಸುತ್ತದೆ. ಸ್ತ್ರೀಜೀವನ ಚಿತ್ರಣದ ಅಸಮರ್ಪಕತೆ ನ್ಯೂನ್ಯತೆ ಹಾಗೂ ತಿರುಚುವಿಕೆಯನ್ನು ಸ್ತ್ರೀವಾದಿ ವಿಮರ್ಶೆ ಎಚ್ಚರದಿಂದ ನೋಡುತ್ತದೆ. ಸ್ತ್ರೀವಾದಿ ವಿಮರ್ಶೆಯು ಸಾಹಿತ್ಯದಲ್ಲಿ ಸ್ಥಾಪಿತವಾದ ಪುರುಷ ಶ್ರೇಷ್ಟತೆಯ ವಿರುದ್ಧ ತನ್ನ ಹೋರಾಟವನ್ನು ಹಲವು ರೀತಿಗಳಲ್ಲಿ ಮಾಡುವುದರ ಜೊತೆಗೆ ರಚನಾತ್ಮಕವಾದ ತನ್ನ ಕರ್ತವ್ಯವನ್ನು ಈ ವಿಮರ್ಶೆ ನಿರ್ವಹಿಸುತ್ತದೆ.

ಮುಖ್ಯವಾಗಿ ಮಹಿಳಾವಾದಿ ದೃಷ್ಟಿಕೋನದಿಂದ ಸಾಹಿತ್ಯದ ಓದನ್ನು ರೂಢಿಸುವ ಆಶಯ ಇದರ ಪ್ರಧಾನ ಉದ್ದೇಶವಾಗಿದೆ. ಮಹಿಳಾವಾದಿ ಓದಿನಿಂದ ಈವರೆಗಿನ ಓದು ಅಥವಾ ತಪ್ಪು ಓದಿನಲ್ಲಿ ಮೂಲಭೂತ ಬದಲಾವಣೆಗಳನ್ನು ತರಬೇಕೆಂಬ ಗುರಿ ಸ್ತ್ರೀವಾದಿ ವಿಮರ್ಶೆಯದಾಗಿದೆ. ಇದು ಉಳಿದೆಲ್ಲ ವಿಮರ್ಶೆಯ ರೀತಿಗಳಂತೆ ಒಟ್ಟು ಸಾಹಿತ್ಯವನ್ನು ಗಮನದಲ್ಲಿಟ್ಟುಕೊಂಡೇ ಸ್ತ್ರೀವಾದಿ ಪ್ರಜ್ಞೆಯಿಂದ ವಿಮರ್ಶಿಸುತ್ತದೆ. ಮಹಿಳೆಯರಿಂದ ರಚಿತವಾದ ಮಹಿಳಾ ಸಾಹಿತ್ಯ, ಮಹಿಳೆಯರನ್ನು ಕೇಂದ್ರವಾಗುಳ್ಳ ಸಾಹಿತ್ಯ ಹಾಗೂ ಮಹಿಳಾವಾದಿಯಾದ ಸಾಹಿತ್ಯ ಸ್ತ್ರೀವಾದಿ ವಿಮರ್ಶೆಯ ಪ್ರಮುಖ ಆಸಕ್ತಿಗಳಾಗಿವೆ. ಸ್ತ್ರೀವಾದಿ ವಿಮರ್ಶೆಯು ಪ್ರಮುಖವಾಗಿ ಪಿತೃ ಸಂಸ್ಕøತಿಯನ್ನು ಅಂತರ್ಗತ ಗೊಳಿಸಿಕೊಂಡ ಹಂತ, ಪಿತೃ ಸಂಸ್ಕøತಿಯನ್ನು ವಿರೋಧಿಸುವ ಹಂತ, ಸಂಶೋಧನೆಯ ಹಂತ ಎಂಬ ಮೂರು ಹಂತಗಳನ್ನು ಹೊಂದಿದೆ.

ಕನ್ನಡದಲ್ಲಿ ನವ್ಯೋತ್ತರ ಕಾಲದಲ್ಲಿ ಬಂಡಾಯ ದಲಿತದೊಂದಿಗೆ ಆರಂಭವಾದ ಸ್ತ್ರೀವಾದಿಪ್ರಜ್ಞೆ, ಸ್ತ್ರೀವಾದಿ ಸಾಹಿತ್ಯ, ಸ್ತ್ರೀವಾದಿ ವಿಮರ್ಶೆಗಳು ತನ್ನದೇ ತಾತ್ವಿಕತೆಯನ್ನು ಗುರುತಿಸಿಕೊಂಡು ಗಟ್ಟಿ ದನಿಯಾಗಿದೆ. ಈ ನಿಟ್ಟಿನಲ್ಲಿ ಮಹಿಳಾ ಸಾಹಿತ್ಯ ಕೂಡ ಪ್ರಧಾನ ನೆಲೆಯಲ್ಲಿ ಸ್ಥಾನವನ್ನು ಗುರುತಿಸಿಕೊಳ್ಳತೊಡಗಿz.É ಲೇಖಕಿಯನ್ನು ಕೇಂದ್ರವಾಗಿಟ್ಟುಕೊಂಡ ವಿಮರ್ಶೆ ಅಭಿನಂದನಾ ಗ್ರಂಥಗಳು, ಮಹಾಪ್ರಬಂದ, ಆತ್ಮಕತೆಗಳು, ಸಂಶೋಧನಾ ಕೃತಿಗಳು, ಬಿಡಿ ಲೇಖನಗಳು ಹೊರಬರುತ್ತಿವೆ. ಸ್ತ್ರೀವಾದಿ ದೃಷ್ಟಿಕೋನದಿಂದ ಕನ್ನಡ ಸಾಹಿತ್ಯವನ್ನು ಪುನರ್ ಪರಿಶೀಲಿಸುವ ಕೆಲಸಗಳು ನಡೆಯುತ್ತಿವೆ. ಸ್ತ್ರೀವಾದಿ ನೆಲೆಯು ಸಾಹಿತ್ಯ, ಸಂಶೋಧನೆ ಕೃತಿಗಳ ಅನುವಾದದ ಕೆಲಸಗಳು ನಡೆಯುತ್ತಿವೆ. ಇದರೊಟ್ಟಿಗೆ ಸಾಂಸ್ಕøತಿಕ ಮತ್ತು ಸಾಹಿತ್ಯದ ಸಂಬಂಧದ ಶೋಧ ಸ್ವತಂತ್ರವಾಗಿಯೇ ನಡೆಯತೊಡಗಿವೆ. ಕನ್ನಡದಲ್ಲಿ ಮಹಿಳೆಯರು ದಿಟ್ಟತನದಿಂದ ಆತ್ಮಚರಿತ್ರೆಗಳನ್ನು ಬರೆಯತೊಡಗಿಸಿದ್ದಾರೆ.

ಸ್ತ್ರೀವಾದ ಎನ್ನುವುದು ಸ್ತ್ರೀಪರುಷರಿಬ್ಬರಿಗೂ ಅವಶ್ಯಕವಾದುದು ಎನ್ನುವುದನ್ನು ಪುರುಷರು ಮನಗಂಡಿದ್ದಾರೆ. ಏಕೆಂದರೆ ಪಿತೃಪ್ರಧಾನ ಸಂಸ್ಕøತಿಯ ಪರಿಣಾಮ ಹೆಣ್ಣು ಗಂಡುಗಳಿಬ್ಬರು ಕಳೆದುಕೊಂಡಿದ್ದಾರೆ. ಶತಶತಮಾನಗಳಿಂದ ಹೆಣ್ಣು ತನ್ನ ಬುದ್ಧಿಶಕ್ತಿ ಸಾಮರ್ಥ್ಯಗಳನ್ನು ಕಳೆದುಕೊಳ್ಳುವಂತಾಗಿದ್ದರೆ, ಗಂಡು ಪ್ರಕೃತಿ ಸಹಜ ಆರ್ಧ್ರ ಭಾವನೆಗಳನ್ನು ಕಳೆದುಕೊಳ್ಳುವಂತಾಗಿದೆ. ಕೇಟ್ ಮಿಲ್ಲೆಟ್‍ರ ಸೆಕ್ಸೂಯಲ್ ಪಾಲಿಟಿಕ್ಸ್ ಕೃತಿಯನ್ನ ಅನುವಾದಿಸದೆ ಶ್ರೀಮತಿ ಎಚ್.ಎಸ್ ಅವರು ಪಿತೃಪ್ರಧಾನ ಸಂಸ್ಕøತಿ ಅಧಿಕಾರದ ನೆಲೆಯನ್ನು ಹಿಡಿಯಲು ಹಲವು ತಂತ್ರಗಳನ್ನು ಬಳಸುತ್ತದೆ. ಆಧಿಕಾರÀ ಅಧೀನತೆಯ ನೆಲೆಗಳು ಸ್ತ್ರೀಪುರುಷರ ನಡುವೆ ಮಾತ್ರವಲ್ಲ, ಎಲ್ಲ ವರ್ಗದ ಗುಂಪುಗಳ ನಡುವೆಯೂ ಇದೆ. ಅಧಿಕಾರದ ನೆಲೆಯನ್ನು ವಿರೋಧಿಸಿ ಸಮಾನತೆಯ ನೆಲೆಯನ್ನು ಬಯಸುವ ಸ್ತ್ರೀವಾದದ ತಾತ್ವಿಕತೆ, ಅದರ ಸಿದ್ಧಾಂತಗಳು ಮಹಿಳೆಯರಿಗೆ ಮಾತ್ರ ಸೀಮಿತವಾಗದೆ, ಎಲ್ಲ ವರ್ಗ ಗುಂಪುಗಳಿಗೂ ಅವಶ್ಯವಾಗಿವೆ. ಇದಕ್ಕೊಂದು ಹೊಸ ಪರಿಭಾಷೆಯನ್ನು ಬಳಸಿಕೊಳ್ಳಬೇಕಷ್ಟೇ ಎನ್ನುತ್ತಾರೆ.

**ಸ್ತ್ರೀವಾದಿ ವಿಮರ್ಶೆಯ ಕೆಲ ಉದಾಹರಣೆಗಳು:**

ಸಾಹಿತ್ಯವು ಪಿತೃ ಪ್ರಧಾನತೆಯು ಸಾಮೂಹಿಕ ಪ್ರಜ್ಞೆಯಾಗಿ ವ್ಯಕ್ತಗೊಳ್ಳುವ ಹಲವು ರೀತಿಗಳನ್ನು ಸ್ತ್ರೀವಾದಿ ವಿಮರ್ಶೇ ವಿಮರ್ಷಿಸುತ್ತದೆ. ನವ್ಯೋತ್ತರ ಸಂದರ್ಭದ ಪ್ರಮುಖ ಸ್ತ್ರೀವಾದಿ ಎನಿಸಿಕೊಂಡ ವಿಜಯ ದಬ್ಬೆಯವರು ಭೋಗಕ್ಕೆ ಬಳಕೆಯಾದವಳ ಅನುಭವವೇನು ಎಂಬುದಕ್ಕೆ ನಮ್ಮ ಸಾಹಿತ್ಯದಲ್ಲಿ ಉತ್ತರವಿದೆಯೇ? ಎಂದು ಪ್ರಶ್ನಿಸುತ್ತಾ, ಹೆಣ್ಣಿನ ಲೈಂಗಿಕ ಸಂತೋಷ ಮತ್ತು ಅಭಿವ್ಯಕ್ತಿ ನಿಷೇಧಕ್ಕೆÀ ಒಳಗಾಗಿತ್ತು. ಅದು ಗಂಡು ಅನುಭಸಿರುವುದು ಮಾತ್ರ ಆಗಿರುತ್ತಿತ್ತು. ಸಾಹಿತ್ಯ ಒಂದಡೆ ಅವಳೂ ದೇಹದ ಬಯಕೆಯುಳ್ಳವಳೆಂಬುದನ್ನು ಮರೆಮಾಚಿದರೆ, ಇನ್ನೊಂದೆಡೆ ಅವಳ ಕಾಮದಾಹ, ತೃಪ್ತಿಯ ಬಗೆಗೆ ಮಾತನಾಡ ಹೊರಟ ಕೃತಿಗಳು ಮರಂಕಿಯವರನ್ನು ಸೃಷ್ಟಿಸಿದ್ದು ಹೆಚ್ಚು. ಆಲನಹಳ್ಳಿ ಕೃಷ್ಣ ಅವರ ಪರಸಂಗದ ಗೆಂಡೆತಿಮ್ಮ ಕಾದಂಬರಿಯ ಕೇಂದ್ರ ಪಾತ್ರವಾದ ಮರಂಕಿಯ ದೇಹ ಸಮ್ರುದ್ಧಿ, ದೇಹದಾಹವು ಹೆಚ್ಚು ಕಡಿಮೆ ಒಂದು ಪಶುಮಟ್ಟದ ವಿವರದಲ್ಲಿ ಉಳಿದುಬಿಟ್ಟಿದೆ. ಪ್ರಾಣೇಶಾಚಾರ್ಯರುಗಳಿಗೆ ತಮ್ಮನ್ನೊಪ್ಪಿಸಿಕೊಳ್ಳಲು ನಿಂತ ಸ್ತ್ರೀಪಾತ್ರಗಳು ಕಾಣಿಸಿದವೇ ಹೊರತು, ಪ್ರಾಣೇಶಚಾರ್ಯರ ಪ್ರತಿಪಾತ್ರವಾದ ಸ್ತ್ರೀಪಾತ್ರಗಳು ಕಾಣಲಿಲ್ಲ ಎನ್ನುತ್ತಾರೆ.

ಎಚ್.ಎಸ್.ಪಾರ್ವತಿಯವರು ಸಾಹಿತ್ಯ ಹೆಣ್ಣು ಅಬಲೆಯೆಂದು ಬಲವಾಗಿ ನಂಬಿಸುತ್ತಲೇ ಬರುತ್ತಿದೆ. ಅದಕ್ಕೆ ಸಾಹಿತ್ಯವನ್ನು ಪ್ರಮುಖ ಆಕರವಾಗಿ ಬಳಸಿಕೊಂಡಿದೆ ಎಂದು ಹೇಳುತ್ತಾರೆ. ಉದಾಹರಣೆಯಾಗಿ ಕಾಡಿನಲ್ಲಿಯೇ ಹುಟ್ಟಿಬೆಳೆದ ಶಕುಂತಲೇ ಒಂದು ದುಂಬಿಗೆ ಹೆದರಿದಳೇ ಎಂದು ಪ್ರಶ್ನಿಸುತ್ತಾ, ಹೆಣ್ಣು ಅಬಲೆಯಾಗಿ ಗಂಡಿನಾಸರೆಯನ್ನು ಬಯಸುತ್ತಾಳೆ ಎಂದು ನಂಬಿಸುವ ತಂತ್ರ ಇದೆಂದು ಹೇಳುತ್ತಾರೆ. ಅನಸೂಯ ಎಂ ಕದಂ ಅವರು ಪುರಾಣಗಳಲ್ಲಿ ಮಾದರಿ ಪಾತ್ರಗಳೆನಿಸಿದ ದ್ರೌಪದಿ, ಸೀತೆಯರ ಪಾತ್ರಗಳ ಮೂಲಕ ಸಮಾಜ ಏನನ್ನು ಬಯಸುತ್ತಿದೆ ಎಂದು ವಿಶ್ಲೇಷಿಸುತ್ತಾ ಮಹಿಳಾ ಶೋಷಣೆಯ ನೆಲೆಗಳನ್ನು ಗುರುತಿಸುತ್ತಾರೆ. ತ್ರೀವೇಣಿ ಕಲ್ಯಾಣಮ್ಮ ಮುಂತಾದವರ ಕಾದಂಬರಿಗಳಲ್ಲಿ ಬರುವ ಹೆಣ್ಣು ಕೊನೆಗೆ ಗಂಡಿನ ಆಸರೆಯಲ್ಲಿಯೇ ನೆಮ್ಮದಿ ಕಾಣುತ್ತಾಳೆ ಎಂಬ ಸೀಮಿತ ತತ್ವವನ್ನು ಸಾಕಷ್ಟು ಸ್ತ್ರೀವಾದಿ ವಿಮರ್ಷಕರು ಚರ್ಚಿಸುತ್ತಾರೆ. ಡಾ ಎಚ್.ಎಸ್ ಅನುಪಯ ಅವರÀ ಬೆಳಗಿನೊಳಗು ಕಾದಂಬರಿ ಮತ್ತಿತರ ಕೃತಿಗಳು ಶ್ರೀಮತಿ ಎಚ್.ಎಸ್ ಅವರ ಅನುವಾದಿತ ಕೃತಿಗಳು ಪ್ರತಿಭಾ ನಂದಕುಮಾರ್ ಅವರ ಆತ್ಮಚರಿತ್ರೆ, ಕೆ.ವೈ.ನಾರಾಯಣಸ್ವಾಮಿಯವರ ನಾಟಕಗಳು, ಸಬಿತಾ ಬನ್ನಾಡಿಯವರ ವಿಮರ್ಶೆಗಳು, ಕೇಶವ ಶರ್ಮರ ವಿಮರ್ಶೆಗಳು ಸುಜಾತ ಅವರ ಮಣಿಮಾಲೆಯಂತಹ ಕಾದಂಬರಿಗಳು ಸ್ತ್ರೀವಾದಿ ಸಾಹಿತ್ಯ ಮತ್ತು ವಿಮರ್ಷೆ ಸಾಗುತ್ತಿರುವ ದಿಕ್ಕನ್ನು ಸೂಚಿಸುತ್ತವೆ.

## ಉಪಸಂಹಾರ

ವಿಮರ್ಶೆ ಎಂದರೇನು ಎನ್ನುವುದನ್ನು ಸ್ಥೂಲವಾಗಿ ಹೇಳುವುದಾದರೆ ಸರಿ ತಪ್ಪುಗಳ ವಿವೇಚನೆ. ಸ್ತ್ರೀವಾದಿ ವಿಮರ್ಶೆಯು ಪ್ರಮುಖವಾಗಿ ಹೆಣ್ಣುಗಳ ನಡುವೆ ಇರುವುದು ಜೈವಿಕ ಭಿನ್ನತೆ ಮಾತ್ರ. ಇದನ್ನೇ ಆದರಸಿ ಹೆಣ್ಣುಗಂಡುಗಳ ನಡುವೆ ಶ್ರೇಣೀಕರಣವನ್ನು ಮಾಡಿ, ಹೆಣ್ಣನ್ನು ದ್ವಿತೀಯ ಸ್ಥಾನಕ್ಕೆ ತಳ್ಳಿರುವ ತಪ್ಪು ಗ್ರಹಿಕೆಯನ್ನು, ಈ ಗ್ರಹಿಕೆಯನ್ನು ರೂಪಿಸಿರುವ ಪಿತೃ ಪ್ರಧಾನತೆಯನ್ನು ಗುರುತಿಸಿ, ಪ್ರಶ್ನಿಸಿ, ಸಮಾನತೆಯ ಹಾದಿಗಳನ್ನು ಹುಡುಕುವ ಉದ್ದೇಶವನ್ನು ಹೊಂದಿರುತ್ತದೆ. ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆ ತನ್ನನ್ನು ಗುರುತಿಸಿಕೊಳ್ಳುತ್ತಿರುವ ಇಂದಿನ ದಿನಗಳಲ್ಲಿಯೂ ಸತಿಯಾದವರ ನಾಡಿನಿಂದ ಬಂದವನು ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಶಾಸಕ, ಕುಂಕುಮದ ಬಗ್ಗೆ ತಾಕೀತು ಮಾಡುವ ಶಾಸಕ ಇªರೆಲ್ಲರು ಗಂಡಾಳ್ವಿಕೆಯ ಪ್ರತಿನಿಧಿಗಳಾಗಿದ್ದಾರೆ. ಸಂವಿಧಾನ ಬದ್ಧ ಹಕ್ಕು ಅವಕಾಶಗಳನ್ನು ಹೆಣ್ಣು ಪಡೆದಿರುವಳಾದರೂ ಗಂಡಾಳ್ವಿಕೆಯಿಂದ ಮುಕ್ತಳಾಗಿಲ್ಲ, ಅಧೀನತೆಯ ನೆಲೆಯಿಂದ ಪೂರ್ಣವಾಗಿ ಸರಿದಿಲ್ಲ, ಆ ಕಾರಣವಾಗಿ ಸ್ತ್ರೀಪುರಷ ಸಮಾನತೆಯನ್ನು ಬಯಸುವ ಸ್ತ್ರೀವಾದ, ಸ್ತ್ರೀವಾದಿ ವಿಮರ್ಶೆ ಅತ್ಯಂತ ಅವಶ್ಯವಾಗಿದೆ.

## ಪರಾಮರ್ಶನ ಕೃತಿಗಳು

1. ಸ್ತ್ರೀವಾದ ಒಂದು ಅವಲೋಕನ, ಬಿ ಎನ್ ಸುಮಿತ್ರಾಬಾಯಿ ಅಹರ್ನಿಶಿ ಪ್ರಕಾಶನ 2018
2. ಸಾಹಿತ್ಯ-ಮಹಿಳಾದೃಷ್ಟಿ, ಎಚ್ ಎಸ್ ಪಾರ್ವತಿ, ಮಾನಸೋಲ್ಲಾಸ ಪ್ರಕಾಶನ
3. ನಾರಿ:ದಾರಿ-ದಿಗಂತ, ವಿಜಯಾ ದಬ್ಬೆ, ರಚನಾ ಪ್ರಕಾಶನ, 1997
4. ಅಧಿಕಾರ ಮತ್ತು ಅದೀನತೆ, ಶ್ರೀಮತಿ ಎಚ್ ಎಸ್, ಆಕಾರ ಪ್ರಕಾಶನ.2022